ಎಲ್ಲಾ ಅಭ್ಯರ್ಥಿಗಳಿಗೂ ಸರಿಸಮನಾದ ಕಾಯಿದೆಗಳನ್ನು ಅನುಸರಿಸಲಾಗಿದ್ದು, ಗ್ರಾಮಾಂತರ ಅಭ್ಯರ್ಥಿಗಳಿಗಾಗಿ ನೇಮಕಾತಿ ಕಾಯಿದೆಗಳನ್ನು ಬೇರೆಯಾಗಿ ಆಳವಡಿಸಿರುವುದಿಲ್ಲ.

ಕುಂದಗೊಳ ಬಸ್ ನಿಲ್ದಾಣಕ್ಕೆ ಡಾಂಬರ್

419 (108). ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೊಳ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕುಂದಗೋಳ ಬಸ್ ನಿಲ್ದಾಣದ ಆವರಣದಲ್ಲಿ ಡಾಂಬರು ಹಾಕುವುದರ ಕುರಿತು ಟೆಂಡರ್ ಕರೆಯಲಾಗಿದೆಯೇ?

ಆ) ಹಾಗಿದ್ದಲ್ಲಿ ಯಾವ ಸಮಯದಲ್ಲಿ ಕೆಲಸ ಪೂರೈಸಲಾಗುವುದು?

ಇ) ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಹಾಗೂ ಸಾರ್ವಜನಿಕರಿಗೆ ಮೂತ್ರಾಲಯದ ಸ್ವಚ್ಛತೆ ಬಗ್ಗೆ ಗಮನ ಹರಿಸಲಾಗಿದೆಯೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಹೌದು.

ಆ) 3 ತಿಂಗಳ ಒಳಗೆ.

ಇ) ಕುಡಿಯುವ ನೀರು ಮತ್ತು ಮೂತ್ರಾಲಯದ ವ್ಯವಸ್ಥೆಯನ್ನು ಮಾಡಲಾಗಿದೆ. ಮೂತ್ರಾಲಯದ ಸ್ವಚ್ಚತೆಯ ಬಗ್ಗೆ ಇನ್ನೂ ಹೆಚ್ಚಿನ ಗಮನ ಹರಿಸಲಾಗುವುದು.

ನ್ಯಾಯವಾದಿಗಳ ಸಂಘಕ್ಕೆ ಹೆಚ್ಚಿನ ಅನುದಾನ

420 (127). ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್):- ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ೧೯೯೧-೨ನೇ ಸಾಲಿನಲ್ಲಿ ರಾಜ್ಯದ ನ್ಯಾಯವಾದಿಗಳ ಸಂಘಕ್ಕೆ ಬಿಡುಗಡೆ ಮಾಡಿದ ಅನುದಾನ ಎಷ್ಟು? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಅನುದಾನ ಕಡಿಮೆಯಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನ್ಯಾಯವಾದಿಗಳ ಸಂಘಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು):-

ಅ) 1-4-91 ರಿಂದ 18-2-92ರ ವರೆವಿಗೆ ರೂ. 1,75,500/- ಅನುದಾನವಾಗಿ ಕೊಡಲಾಗಿದೆ.

ವಿವರಗಳ ಅನುಬಂಧ ಲಗತ್ತಿಸಿದೆ.

ಆ) ಅನುದಾನ ಹೆಚ್ಚಿಸುವಂತೆ ಮನವಿಗಳು ಬಂದಿದೆ.

ಇ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ

1991-92ನೇ ಸಾಲಿನಲ್ಲಿ ಇಲ್ಲಿಯವರೆಗೆ, ಜಿಲ್ಲಾ ಮತ್ತು ತಾಲ್ಲೂಕು ನ್ಯಾಯವಾದಿಗಳ ಸಂಘಕ್ಕೆ ಅನುದಾನ ಮಂಜೂರು ಮಾಡಿರುವ ವಿವರಗಳನ್ನೊಳಗೊಂಡ ಪಟ್ಟಿ.

	ಬೆಂಗಳೂರು ಜಿಲ್ಲೆ	ರೂ. ಪೈ.
1.	ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್	25,000-00
2.	ನ್ಯಾಯವಾದಿಗಳ ಸಂಘ, ಮಾಗಡಿ	1,000-00
3.	ವಕೀಲರ ಸಂಘ, ದೇವನಹಳ್ಳಿ	1,000-00
4.	ಭಾರತ ಮಹಿಳಾ ವಕೀಲರ ಸಂಯುಕ್ತ ಸಂಘ, ಕೋಲಾರ ಜಿಲ್ಲೆ	15,000-00
5.	ನ್ಯಾಯವಾದಿಗಳ ಸಂಘ, ಚಿಕ್ಕಬಳ್ಳಾಪುರ	2,000-00
6.	ನ್ಯಾಯವಾದಿಗಳ ಸಂಘ, ಚಿಂತಾಮಣಿ	2,000-00
7.	ನ್ಯಾಯವಾದಿಗಳ ಸಂಘ, ಗೌರಿಬಿದನೂರು ತುಮಕೂರು ಜಿಲ್ಲೆ	1,000-00
8.	ನ್ಯಾಯವಾದಿಗಳ ಸಂಘ, ತುಮಕೂರು	3,000-00
9.	ನ್ಯಾಯವಾದಿಗಳ ಸಂಘ, ತಿಪಟೂರು	2,000-00
10.	ನ್ಯಾಯವಾದಿಗಳ ಸಂಘ, ಮಧುಗಿರಿ	2,000-00
11.	ನ್ಯಾಯವಾದಿಗಳ ಸಂಘ, ಕೊರಟಗೆರೆ	2,000-00
12.	ನ್ಯಾಯವಾದಿಗಳ ಸಂಘ, ಸಿರಾ	1,000-00
13.	ನ್ಯಾಯವಾದಿಗಳ ಸಂಘ, ಚಿಕ್ಕನಾಯಕನಹಳ್ಳಿ	1,000-00
14.	ನ್ಯಾಯವಾದಿಗಳ ಸಂಘ, ತುರುವೇಕೆರೆ ಮೈಸೂರು ಜಿಲ್ಲೆ	1,000-00
15.	ನ್ಯಾಯವಾದಿಗಳ ಸಂಘ, ಮೈಸೂರು	3,000-00
16.	ನ್ಯಾಯವಾದಿಗಳ ಸಂಘ, ನಂಜನಗೂಡು ಮಂಡ್ಯ ಜಿಲ್ಲೆ	2,000-00
17.	ನ್ಯಾಯವಾದಿಗಳ ಸಂಘ, ಮಂಡ್ಯ	3,000-00
18.	ನ್ಯಾಯವಾದಿಗಳ ಸಂಘ, ಕೃಷ್ಣರಾಜಪೇಟೆ ಹಾಸನ ಜಿಲ್ಲೆ	1,000-00
19.	ನ್ಯಾಯವಾದಿಗಳ ಸಂಘ, ಹಾಸನ	3,000-00
20.	ನ್ಯಾಯವಾದಿಗಳ ಸಂಘ, ಅರಸೀಕೆರೆ	1,500-00
21.	ನ್ಯಾಯವಾದಿಗಳ ಸಂಘ, ಸಕಲೇಶಪುರ ಶಿವಮೊಗ್ಗ ಜಿಲ್ಲೆ	1,000-00
22.	ನ್ಯಾಯವಾದಿಗಳ ಸಂಘ, ಭದ್ರಾವತಿ	2,000-00 2,000-00
23.	ನ್ಯಾಯವಾದಿಗಳ ಸಂಘ, ಸಾಗರ	2,000-00
24.	ನ್ಯಾಯವಾದಿಗಳ ಸಂಘ, ತೀರ್ಥಹಳ್ಳಿ	1,000-00
25.	ನ್ಯಾಯವಾದಿಗಳ ಸಂಘ, ಸೊರಬ ಚಿಕ್ಕಮಗಳೂರು ಜಿಲ್ಲೆ	1,000-00
26.	ನ್ಯಾಯವಾದಿಗಳ ಸಂಘ, ಮೂಡಿಗೆರೆ	1,000-00

	ಬಳ್ಳಾರಿ ಜಿಲ್ಲೆ	
27.	ನ್ಯಾಯವಾದಿಗಳ ಸಂಘ, ಸಿರುಗುಪ್ಪ	1,000-00
	ಬೆಳಗಾಂ ಜಿಲ್ಲೆ	
28.	ನ್ಯಾಯವಾದಿಗಳ ಸಂಘ, ಬೈಲಹೊಂಗಲ	2,000-00
29.	ನ್ಯಾಯವಾದಿಗಳ ಸಂಘ, ಗೋಕಾಕ್	2,000-00
30.	ನ್ಯಾಯವಾದಿಗಳ ಸಂಘ, ಖಾನಾಪುರ	1,000-00
	ಬಿಜಾಪುರ ಜಿಲ್ಲೆ	
31.	ನ್ಯಾಯವಾದಿಗಳ ಸಂಘ, ಬಾಗಲಕೋಟೆ	2,000-00
32.	ನ್ಯಾಯವಾದಿಗಳ ಸಂಘ, ಜಮಖಂಡಿ	2,000-00
33.	ನ್ಯಾಯವಾದಿಗಳ ಸಂಘ, ಹುನಗುಂದ್	1,000-00
34.	ನ್ಯಾಯವಾದಿಗಳ ಸಂಘ, ಸಿಂಧಗಿ	1,000-00
	ಧಾರವಾಡ ಜಿಲ್ಲೆ	
35.	ನ್ಯಾಯವಾದಿಗಳ ಸಂಘ, ಲಕ್ಷ್ಮೇಶ್ವರ	1,000-00
36.	ನ್ಯಾಯವಾದಿಗಳ ಸಂಘ, ರಾಣೆಬೆನ್ನೂರು	2,000-00
37.	ನ್ಯಾಯವಾದಿಗಳ ಸಂಘ, ಕುಂದಗೋಲ್	1,000-00
38.	ನ್ಯಾಯವಾದಿಗಳ ಸಂಘ, ರೋಣ	1,000-00
39.	ನ್ಯಾಯವಾದಿಗಳ ಸಂಘ, ಹಿರೇಕೆರೂರ್	1,000-00
40.	ನ್ಯಾಯವಾದಿಗಳ ಸಂಘ, ಬ್ಯಾಡಗಿ	1,000-00
	ಉತ್ತರ ಕನ್ನಡ ಜಿಲ್ಲೆ	
41.	ನ್ಯಾಯವಾದಿಗಳ ಸಂಘ, ಕುಮಟ	1,000-00
42.	ನ್ಯಾಯವಾದಿಗಳ ಸಂಘ, ಹೊನ್ನಾವರ	1,500-00
43.	ನ್ಯಾಯವಾದಿಗಳ ಸಂಘ, ಸಿದ್ದಾಪುರ	1,000-00
	ಬೀದರ್ ಜಿಲ್ಲೆ	
44.	ನ್ಯಾಯವಾದಿಗಳ ಸಂಘ, ಭಾಲ್ಕಿ	1,000-00
	ಗುಲ್ಬರ್ಗಾ ಜಿಲ್ಲೆ	
45.	ನ್ಯಾಯವಾದಿಗಳ ಸಂಘ, ಗುಲ್ಬರ್ಗಾ	3,000-00
46.	ನ್ಯಾಯವಾದಿಗಳ ಸಂಘ, ಶೋರಾಪುರ್	1,000-00
47.	ನ್ಯಾಯವಾದಿಗಳ ಸಂಘ, ಯಾದಗಿರಿ	2,000- 00
48.	ನ್ಯಾಯವಾದಿಗಳ ಸಂಘ, ಸೇಡಂ	1,000-00
49.	ನ್ಯಾಯವಾದಿಗಳ ಸಂಘ, ಷಹಾಪುರ್	1,000-00
	ದಕ್ಷಿಣ ಕನ್ನಡ ಜಿಲ್ಲೆ	
50.	ನ್ಯಾಯವಾದಿಗಳ ಸಂಘ, ಮಂಗಳೂರು	25,000-00
51.	ನ್ಯಾಯವಾದಿಗಳ ಸಂಘ, ಉಡುಪಿ	2,000-00
52.	ನ್ಯಾಯವಾದಿಗಳ ಸಂಘ, ಕಾರ್ಕಳ	1,500-00
53.	ನ್ಯಾಯವಾದಿಗಳ ಸಂಘ, ಪುತ್ತೂರು	2,000-00
54.	ನ್ಯಾಯವಾದಿಗಳ ಸಂಘ, ಬಂಟವಾಳ	1,500-00
55.	ನ್ಯಾಯವಾದಿಗಳ ಸಂಘ, ಸೂಳ್ಯ	1,000-00

ಕೊಡಗು ಜಿಲ್ಲೆ

56.	ನ್ಯಾಯವಾದಿಗಳ ಸಂಘ, ಮಡಿಕೇರಿ	3,000-00
57.	ನ್ಯಾಯವಾದಿಗಳ ಸಂಘ, ವಿರಾಜಪೇಟೆ	1,500-00
58.	ನ್ಯಾಯವಾದಿಗಳ ಸಂಘ, ಸೋಮವಾರಪೇಟೆ	1,000-00

ಕೊಡಗು ಜಿಲ್ಲೆಯಲ್ಲಿ ವೋಲ್ಟೇಜ್ ಸಮಸ್ಯೆ

421 (601). ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ವೋಲ್ಟೇಜ್ ಸಮಸ್ಯೆ ಬಗ್ಗೆ ಸರ್ಕಾರದ ಗಮನಕ್ಕೆ ದೂರು ಬಂದಿದೆಯೆ, ಹಾಗಿದ್ದಲ್ಲಿ ಸರಿಪಡಿಸಲು ಕೈಗೊಂಡ ಕ್ರಮವೇನು?

ಆ) ಕೊಡಗು ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ನಿಲುಗಡೆ ಪ್ರತಿನಿತ್ಯ ಎಷ್ಟು ಗಂಟೆ ಜಾರಿಯಲ್ಲಿದೆ ಅದನ್ನು ಸಡಿಲಗೊಳಿಸುವ ಆಲೋಚನೆ ಇದೆಯೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಬಂದಿದೆ. ಕೊಡಗು ಜಿಲ್ಲೆಗೆ ವಿದ್ಯುತ್ ಸರಬರಾಜು ಮಾಡುತ್ತಿರುವ ಹೂಟಗಳ್ಳಿ (ಮೈಸೂರು) 220:66 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ 30 ಎಂ.ವಿ.ಎ.ಆರ್. ಸಾಮರ್ಥ್ಯದ ಕೆಪಾಸಿಟರ್ ಬಾಂಕನ್ನು ಸ್ಥಾಪಿಸಲಾಗುತ್ತಿದ್ದು, ಇದು ಕಾರ್ಯಾರಂಭ ಮಾಡಿದ ನಂತರ ವಿದ್ಯುತ್ ವೋಲ್ಟೇಜ್ ಮಟ್ಟದಲ್ಲಿ ಸುಧಾರಣೆಯಾಗುವುದು ಮತ್ತು ಶಿವಮೊಗ್ಗ-ಮೈಸೂರು 220 ಕೆ.ವಿ.ಎರಡನೇ ಸರ್ಕೂಟ್‌ನ ತಂತಿಗಳನ್ನು ಎಳೆಯುತ್ತಿದ್ದು, ಈ ಕೆಲಸವು ಮುಗಿದನ ತರ ವಿದ್ಯುತ್ ವೋಲ್ಟೇಜ್ ಮತ್ತು ಲಭ್ಯತೆಯ ಪ್ರಮಾಣದಲ್ಲಿ ಉತ್ತಮಗೊಳ್ಳುವುದು.

ಆ) ವಿದ್ಯುಚ್ಛಕ್ತಿ ನಿಲುಗಡೆಯನ್ನು ಕಾಫೀ ಪಲ್ಪಿಂಗ್ ಸೀಸನ್ ಆದ್ದರಿಂದ ಸಂಪೂರ್ಣವಾಗಿ ಸಡಿಲಿಸಲಾಗಿದೆ.

ನೀರಾವರಿ ಪಂಪುಸೆಟ್ಟುಗಳಿಗೆ ಬಂದಿರುವ ಅರ್ಜಿಗಳ ಸಂಖ್ಯೆ

422 (602). ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಯ ಸರಬರಾಜಿಗಾಗಿ ಈವರೆಗೆ ನೀರಾವರಿ ಪಂಪುಸೆಟ್ಟುಗಳ ಮಾಲೀಕರಿಂದ ಬಂದಿರುವ ಅರ್ಜಿಗಳೆಷ್ಟು ? (ವಿವರಗಳನ್ನು ನೀಡುವುದು).

ಆ) ಕೊಡಗು ಜಿಲ್ಲೆಯಲ್ಲಿ ಇನ್ನೂ ಕೆಲವು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಎಲ್ಲಾ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಡುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):-

ಅ) ಪ್ರಸಕ್ತ ವರ್ಷದಲ್ಲಿ (1991-92 ಜನವರಿ 92ರ ಅಂತ್ಯದವರೆಗೆ ಕೊಡಗು ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕೋರಿ ನೊಂದಾಯಿತವಾಗಿರುವ ಅರ್ಜಿಗಳ ಒಟ್ಟು ಸಂಖ್ಯೆ 358.

ತಾಲ್ಲೂಕಿವಾರು ವಿವರ ಕೆಳಕಂಡಂತಿದೆ

ತಾಲ್ಲೂಕು	ನೋಂದಾಯಿತರಾಗಿರುವ ಅರ್ಜಿಗಳ ಸಂಖ್ಯೆ
ಮಡಿಕೇರಿ	123